# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ

ದಿನಾಂಕ : 17-02-2018

ಪ್ರಕಟಣೆಯ ಕೃಪೆಗಾಗಿ

**ಕಾಲೇಜಿನಲ್ಲಿ ಕಲಿಯೋದು ಕೈ ಅಗಲ, ಜೀವನದಲ್ಲಿ ಕಲಿಯಬೇಕಾದ್ದು ಜಗದಗಲ – ಡಾ|| ಶಿವರುದ್ರಸ್ವಾಮಿ**

**ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪೋಷಕರ ಸಭೆ**

ಕೊಳ್ಳೇಗಾಲ 17-02-2018 : ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಿಂದ ಪಡೆಯುವ ಶಿಕ್ಷಣದ ಜೊತೆಗೆ ಜೀವನ ಶಿಕ್ಷಣವೂ ತುಂಬಾ ಮುಖ್ಯವಾಗುತ್ತದೆ. ಈ ಶಿಕ್ಷಣವನ್ನು ನೀಡುವಲ್ಲಿ ಪೋಷಕರ ಪಾತ್ರ ದೊಡ್ಡದು. ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಕಲಿಯೋದು ಕೈ ಅಗಲವಷ್ಟೇ, ಜೀವನದಲ್ಲಿ ಕಲಿಯುವುದಿದೆ ಜಗದಗಲ ಎಂದು ಕಾಲೇಜು ಆಡಳಿತ ಮಂಡಳಿ ಸದಸ್ಯರು ಹಾಗೂ ಪ್ರಖ್ಯಾತ ವೈದ್ಯರಾದ ಡಾ|| ಶಿವರುದ್ರಸ್ವಾಮಿ ಯವರು ಅಭಿಪ್ರಾಯಿಸಿದರು.

ಇಲ್ಲಿನ ಜೆಎಸ್‌ಎಸ್ ಮಹಿಳಾ ಕಾಲೇಜನಲ್ಲಿ "ಪೋಷಕರ – ವಿದ್ಯಾರ್ಥಿ ಸಮಿತಿ" ವತಿಯಿಂದ ಆಯೋಜಿಸಿದ್ದ ಪೋಷಕರ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು.

ಇಂದು ವಿದ್ಯಾರ್ಥಿಗಳು ಕಂಪ್ಯೂಟರ್, ಮೊಬೈಲ್, ಮೊದಲಾದ ವಿಷಯಗಳ ಹಿಂದೆ ಹೆಚ್ಚು ಹೆಚ್ಚಾಗಿ ಮುಗಿ ಬೀಳುತ್ತಿದ್ದಾರೆ. ಪರೀಕ್ಷೆಗಳಿಗೆ ಬೇಕಾದ ತಯಾರಿಯಲ್ಲಿ ಹಿಂದೆ ಬೀಳುತ್ತಿದ್ದಾರೆ. ಅದೇ ರೀತಿ ಇಂದಿನ ಮಾಹಿತಿ ಮತ್ತು ತಂತ್ರಜ್ಞಾನವೆಂಬ ಮಾಯಾಲೋಕದಲ್ಲಿ ಸಂಸ್ಕಾರವನ್ನು ಮರೆಯುತ್ತಿದ್ದಾರೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಕಾಲೇಜು ಜೀವನವನ್ನು ಮೋಜಿನ ಜೀವನವೆಂದೇ ಭಾವಿಸಿ, ಕಾಲೇಜು ಜೀವನ ತಮ್ಮ ಉಜ್ವಲ ಭವಿಷ್ಯದ ಅಡಿಪಾಯ ಎಂಬ ಸತ್ಯವನ್ನೇ ಮರೆತು ತಮ್ಮ ಮುಂದಿನ ಸೊಗಸಾದ ಜೀವನವನ್ನು ರೂಪಿಸಿಕೊಳ್ಳುವುದರಲ್ಲಿ ಸೋಲುತ್ತಿರುವುದು ದುರದೃಷ್ಟಕರ. ಈ ದಿಶೆಯಲ್ಲಿ ಪೋಷಕರು ತಮ್ಮ ಮಕ್ಕಳ ಶಾಲಾ – ಕಾಲೇಜುಗಳಲ್ಲಿನ ಹಾಜರಾತಿ, ಪರೀಕ್ಷಾ ಅಂಕಗಳು, ಕಾಲೇಜಿನ ವೇಳಾ ಪಟ್ಟಿ, ಇತ್ಯಾದಿಗಳ ಬಗ್ಗೆ ನಿರಂತರವಾಗಿ ತಿಳಿದುಕೊಳ್ಳಲು ಪ್ರಯತ್ನಿಸಿ, ಕಾಲೇಜುಗಳಿಗೆ ನಿರಂತರ ಭೇಟಿ ಕೊಡುವ ಅಭ್ಯಾಸ ಹೊಂದಿರಬೇಕು ಎಂದು ಕರೆ ನೀಡಿದರು.

ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ಪ್ರಾಸ್ತಾವಿಕ ನುಡಿ ನೀಡುತ್ತ ಕಾಲೇಜಿನಲ್ಲಿ ನಿರಂತರವಾಗಿ ಪ್ರತೀ ಶೈಕ್ಷಣಿಕ ವರ್ಷದಲ್ಲಿ ಪೋಷಕರ ಸಭೆಗಳನ್ನು ನಡೆಸಿ, ಸಭೆಯಲ್ಲಿ ಪೋಷಕರು ಮಂಡಿಸುವ ಅಹವಾಲು ಮತ್ತು ಸಲಹೆಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಆದ್ದರಿಂದ ತಾವು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಅಹವಾಲುಗಳನ್ನು ಹಾಗೂ ಸಲಹೆಗಳನ್ನು ತಿಳಿಸಬೇಕೆಂದು ಕರೆ ನೀಡಿದರು.

ಪ್ರಾಚಾರ್ಯ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿದ್ದರು.

ಪ್ರೊ. ಹೆಚ್.ಜಿ. ನಟರಾಜನ್, ಶ್ರೀಮತಿ ಎಸ್ ಮಮತ, ಶ್ರೀ ಮಂಜುನಾಥ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀ ಬಸವದತ್ತ ಮಹದೇವಪ್ರಸಾದ್ ಸ್ವಾಗತಿಸಿ ಮಂದಿಸಿದರು. ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದ ಪೋಷಕರು ಕಾಲೇಜಿನ ಉನ್ನತಿಗಾಗಿ ಸಲಹೆಗಳನ್ನು ನೀಡಿದರಲ್ಲದೆ, ಕಾಲೇಜಿನ ಸೌಲಭ್ಯ ಭದಯ ಭ ಹಾಗೂ ಇತರೆ ವ್ಯವಸ್ಥೆಗಳ ಬಗ್ಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

"ಪೋಷಕರ – ವಿದ್ಯಾರ್ಥಿ ಸಮಿತಿ" ವತಿಯಿಂದ ಪೋಷಕರ ಸಭೆ.
ಆಡಳಿತ ಮಂಡಳಿ ಸದಸ್ಯರಾದ ಡಾ|| ಶಿವರುದ್ರ ಸ್ವಾಮಿಯವರು ಉದ್ಘಾಟಿಸುತ್ತಿರುವುದು.
ಚಿತ್ರದಲ್ಲಿ ಶ್ರೀ ಬಿ. ಮಂಜುನಾಥ, ಶ್ರೀ ಹೆಚ್.ಜಿ ನಟರಾಜನ್, ಪ್ರಾಚಾರ್ಯ ಪ್ರೊ. ಉಮೇಶ, ಡಾ. ಎಂ ಪ್ರಭು ಹಾಗೂ ಶ್ರೀಮತಿ ಎಸ್ ಮಮತ ರವರನ್ನು ಕಾಣಬಹುದು.



ಆಡಳಿತ ಮಂಡಳಿ ಸದಸ್ಯರಾದ ಡಾ|| ಶಿವರುದ್ರ ಸ್ವಾಮಿಯವರು ಉದ್ಘಾಟನಾ ಭಾಷಣ ಮಾಡುತ್ತಿರುವುದು.
ಚಿತ್ರದಲ್ಲಿ ಶ್ರೀ ಬಿ. ಮಂಜುನಾಥ, ಶ್ರೀ ಹೆಚ್.ಜಿ ನಟರಾಜನ್, ಪ್ರಾಚಾರ್ಯ ಪ್ರೊ. ಉಮೇಶ, ಡಾ. ಎಂ ಪ್ರಭು ಹಾಗೂ ಶ್ರೀಮತಿ ಎಸ್ ಮಮತ ರವರನ್ನು ಕಾಣಬಹುದು.



ಆಡಳಿತ ಮಂಡಳಿ ಸದಸ್ಯರಾದ ಡಾ॥ ಶಿವರುದ್ರಸ್ವಾಮಿಯವರು ಉದ್ಘಾಟನಾ ಭಾಷಣ ಮಾಡುತ್ತಿರುವುದು.
ಚಿತ್ರದಲ್ಲಿ ಶ್ರೀ ಬಿ. ಮಂಜುನಾಥ, ಶ್ರೀ ಹೆಚ್.ಜಿ ನಟರಾಜನ್, ಪ್ರಾಚಾರ್ಯ ಪ್ರೊ. ಉಮೇಶ, ಡಾ. ಎಂ ಪ್ರಭು ಹಾಗೂ ಶ್ರೀಮತಿ ಎಸ್ ಮಮತ ರವರನ್ನು ಕಾಣಬಹುದು.




ಕಾರ್ಯಕ್ರಮದಲ್ಲಿ ಭಾಗವಹಿಸಿರುವ ಪೋಷಕರು ಹಾಗೂ ಅಧ್ಯಾಪಕರು

